
# ಕಪ್ಪು ಮುತ್ತು – ಪೆಲೆ

ಈ ವಿಜಯ ದಶಮಿಯ ದಿನ ಪೆಲೆ 75ಕ್ಕೆ ಕಾಲಿಟ್ಟಿದ್ದಾರೆ. ವಿಜಯ ದಶಮಿಯ ಸಂಭ್ರಮಕ್ಕೂ ಮುನ್ನ ಭಾರತಕ್ಕೆ ಬಂದ ಪೆಲೆ, ಕೋಲ್ಕತ್ತಾ ಮತ್ತು ದೆಹಲಿಗಳಲ್ಲಿ ಫುಟ್‌ಬಾಲ್‌ಪ್ರಿಯರ ಜತೆಗೆ ಕಾಲ ಕಳೆದು, ಅಸಂಖ್ಯಾತ ಅಭಿಮಾನಿಗಳಲ್ಲಿ ಪುಳಕ ಹುಟ್ಟಿಸಿದ್ದಾರೆ. ಈ ತಲೆಮಾರಿನ ಫುಟ್‌ಬಾಲ್ ಅಭಿಮಾನಿಗಳು ಪೆಲೆಯನ್ನು ಪ್ರತ್ಯಕ್ಷ ಕಂಡು ರೋಮಾಂಚನಗೊಂಡಿದ್ದಾರೆ. ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ಪೆಲೆಯನ್ನು ನೋಡಲು 80 ಸಾವಿರ ಜನ ಸೇರಿದ್ದರೆಂದರೆ ಈ 'ಫುಟ್ಬಾಲ್ ದಂತಕಥೆ'ಯ ಮಹತ್ವ ಅರಿವಾಗುತ್ತದೆ. ಇವತ್ತು ಗಂಟೆಗೆ ಕೋಟ್ಯಂತರ ಡಾಲರ್ ದುಡಿಯುವ ವಿಶ್ವದ ಯಾವ ಫುಟ್‌ಬಾಲ್ ತಾರೆಯರನ್ನು ಹೋಲಿಸಿದರೂ, ಪೆಲೆಯ ಜನಪ್ರಿಯತೆಯ ಅರ್ಧಕ್ಕೂ ಬರುವುದಿಲ್ಲ. ಈ ಹಿಂದೆ ಪೆಲೆ ಕೋಲ್ಕತ್ತಾಗೆ ಬಂದದ್ದು 1977ರಲ್ಲಿ. ಅಂದು ನ್ಯೂಯಾರ್ಕ್ ಕಾಸ್ಮೋಸ್ ಮತ್ತು ಮೋಹನ್ ಬಾಗನ್ ನಡುವಣ ಪ್ರದರ್ಶನ ಪಂದ್ಯದಲ್ಲಿ ಪೆಲೆ ಆಡಿದ್ದರು. ಆಗಲೂ ಸಹಸ್ರಾರು ಜನರು ಪೆಲೆಯ ಆಟವನ್ನು ನೋಡಲು ಸೇರಿದ್ದರು. ಈಗ 38 ವರ್ಷಗಳ ಬಳಿಕ ಪೆಲೆ ಮತ್ತೆ ಕೋಲ್ಕತ್ತಾಗೆ ಬಂದದ್ದು, ಆಗಿನ ಮೋಹನ್ ಬಾಗನ್ ತಂಡದ ಆಟಗಾರರನ್ನು ಸನ್ಮಾನಿಸಲು! 1977ರ ಬಳಿಕ ಕೋಲ್ಕತ್ತಾದ ಇದೇ ಸ್ಟೇಡಿಯಂಗೆ ಫುಟ್‌ಬಾಲ್ ದಿಗ್ಗಜರಾದ ಡಿಯಾಗೊ ಮೆರಡೋನ ಮತ್ತು ಲಯನಲ್ ಮೆಸ್ಸಿ ಕೂಡಾ ಬಂದು ಹೋಗಿದ್ದಾರೆ. ಆದರೆ ಅವರು ಯಾರಿಗೂ ಸೇರದಷ್ಟು ಜನ 74ರ ಹರೆಯದ ಅಜ್ಜ ಪೆಲೆಯನ್ನು ನೋಡಲು ಸೇರಿದ್ದಾರೆ. ಈತ ವಿಶ್ವ ಫುಟ್‌ಬಾಲ್ ಲೋಕದ 'ಕಪ್ಪು ಮುತ್ತು' ಎನ್ನುವುದು ಸುಳ್ಳಲ್ಲ.

ಬ್ರೆಝಿಲ್‌ನ ಸಾವೊ ಪೌಲೋದ ಬಡ ಕುಟುಂಬವೊಂದರಲ್ಲಿ ಜನಿಸಿದ ಎಡ್ಸನ್ ಅರಾಂಟಸ್ ಡು ನಸ್ಸಿಮೆಂಟೊ, ಹೊಟ್ಟೆಪಾಡಿಗಾಗಿ ಟೀ ಶಾಪ್ ಒಂದರಲ್ಲಿ ಕೆಲಸ ಮಾಡುತ್ತಿದ್ದ. ಈ ಎಡ್ಸನ್ 'ಪೆಲೆ' ಆಗಿ ಜಗದ್ವಿಖ್ಯಾತಿ ಹೊಂದಿದ್ದೂ ಒಂದು ಅಚ್ಚರಿಯ ಕಥೆಯೇ. 13ರ ಹರೆಯದ ಎಡ್ಸನ್, ಬ್ರೆಝಿಲ್‌ನ ಫುಟ್‌ಬಾಲ್ ಆಟಗಾರ ವಾಲ್ಡಮರ್ ಡಿ ಬ್ರಿಟೊ ಕಣ್ಣಿಗೆ ಬಿದ್ದದ್ದೇ ಅದೃಷ್ಟ ಬದಲಾಯಿತು. ಪುಟ್ಟ ಬಾಲಕನ ಫುಟ್‌ಬಾಲ್ ಆಟವನ್ನು ನೋಡಿ ಬೆರಗಾದ ಬ್ರಿಟೊ, ತನ್ನ ಜತೆಗೇ ಸಾಂಟೋಸ್‌ಗೆ ಕರೆದೊಯ್ದ. ಚಿಕ್ಕಂದಿನಲ್ಲಿಯೇ ಎಡ್ಸನ್, ಆಗಿನ ಪ್ರಖ್ಯಾತ ತಂಡ ವಾಸ್ಕೋಡಗಾಮದ ಗೋಲಿ 'ಬೆಲೆ' ಎಂಬಾತನ ಆಟವನ್ನು ಬಹುವಾಗಿ ಮೆಚ್ಚಿಕೊಂಡಿದ್ದ. ಆದರೆ ಬೆಲೆಯ ಹೆಸರನ್ನು ಈ ಹುಡುಗ 'ಪೆಲೆ' ಎಂದು ಉಚ್ಚರಿಸುತ್ತಿದ್ದ. ಕ್ರಮೇಣ ಸಹ ಆಟಗಾರರ ಬಾಯಲ್ಲಿ ಈತನ ಹೆಸರೇ ಪೆಲೆ ಎಂದಾಯಿತು!



15ರ ಹರೆಯದಲ್ಲಿ ಮೊತ್ತಮೊದಲ ಅಂತರರಾಷ್ಟ್ರೀಯ ಪಂದ್ಯವಾಡಿದ್ದು ಪೆಲೆಯ ಹೆಗ್ಗಳಿಕೆ. ಆಗ ಬ್ರೆಝಿಲ್ ತನ್ನ ಬದ್ಧ ವೈರಿ ತಂಡ ಅರ್ಜೆಂಟೀನಾ ವಿರುದ್ಧ 2–1 ಗೋಲುಗಳಿಂದ ಗೆದ್ದಿತ್ತು. ಪೆಲೆ ಮಹತ್ವದ ಒಂದು ಗೋಲು ಹೊಡೆದಿದ್ದ. 17ರ ಹರೆಯದಲ್ಲಿ (1958) ಮೊದಲ ವಿಶ್ವಕಪ್ ಆಡಿದ ಪೆಲೆ ನಾಲ್ಕು ಪಂದ್ಯಗಳಲ್ಲಿ ಆರು ಗೋಲುಗಳನ್ನು ಹೊಡೆದು ಇಡೀ ವಿಶ್ವದ ಕಣ್ಮಣಿಯಾದ. ಮೊದಲ ವಿಶ್ವಕಪ್‌ನಲ್ಲೇ 'ಬೆಸ್ಟ್ ಯಂಗೆಸ್ಟ್ ಪ್ಲೇಯರ್' ಪ್ರಶಸ್ತಿ ಗೆದ್ದುಕೊಂಡ. ಪೆಲೆ ಯುಗ ಹೇಗೆ ಮುಂದುವರಿಯಿತೆಂದರೆ, ಬ್ರೆಝಿಲ್ 1958, 1962 ಮತ್ತು 1970ರಲ್ಲಿ ಮೂರು ಬಾರಿ ವಿಶ್ವಕಪ್ ಗೆದ್ದುಕೊಂಡಿತು. ಮೂರು ಸಲ ವಿಶ್ವಕಪ್ ಗೆದ್ದ ತಂಡದಲ್ಲಿ ಆಟವಾಡಿದ ಜಗತ್ತಿನ ಏಕೈಕ ಫುಟ್‌ಬಾಲ್ ಆಟಗಾರ ಪೆಲೆ.

ಸದ್ಯಕ್ಕೆ ಪೆಲೆ ದೇಹ ಹಣ್ಣಾಗಿದೆ. 74ರ ಅಜ್ಜ ಕೈಯಲ್ಲಿ ಸ್ಟಿಕ್ ಹಿಡಿದುಕೊಂಡು ನಡೆಯುತ್ತಾರೆ. ಈ ವರ್ಷ ಒಟ್ಟು ಮೂರು ಸರ್ಜರಿಗಳಾಗಿವೆ. ಆದರೆ ಫುಟ್‌ಬಾಲ್ ಮೈದಾನದಲ್ಲಿ ಕಿಕ್ಕಿರಿದು ಸೇರುವ ಅಭಿಮಾನಿಗಳನ್ನು ನೋಡಿದಾಕ್ಷಣ ಅವರು ತುಂಟ ಯುವಕರಾಗುತ್ತಾರೆ. ಮೊನ್ನೆ ಕೋಲ್ಕತ್ತಾದಲ್ಲೂ ಅಭಿಮಾನಿಗಳನ್ನು ನೋಡಿ, 'ಇನ್ನೊಬ್ಬ ಪೆಲೆ ಬರೋದಿಲ್ಲ. ಏಕೆಂದರೆ ನನ್ನ ಅಪ್ಪ–ಅಮ್ಮ ಯಂತ್ರವನ್ನು ಬಂದ್ ಮಾಡಿದ್ದಾರೆ' ಎಂದು ತುಂಟತನದ ನಗೆ ನಕ್ಕಿದ್ದರು ಪೆಲೆ.

ಫುಟ್‌ಬಾಲ್ ಆಟಗಾರರಿಗೆ ಪೆಲೆ ಸದಾ ಹೇಳುವ ಮಾತು– 'ನಿಮಗೆ ವಿಶೇಷವಾದ ಪ್ರತಿಭೆ ಇರಬೇಕು. ಜತೆಗೆ ಖ್ಯಾತಿಯ ತುತ್ತತುದಿಗೆ ಏರಿದಾಗಲೂ ನಾನೇ ಬೆಸ್ಟ್ ಎಂದು ಯಾವತ್ತೂ ಅಂದುಕೊಳ್ಳಬೇಡಿ!'

1363 ವೃತ್ತಿಪರ ಪಂದ್ಯಗಳನ್ನು ಆಡಿದ, ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಒಟ್ಟು 1281 ಗೋಲು ಗಳಿಸಿದ (ಇದರಲ್ಲಿ 77 ಬ್ರೆಝಿಲ್ ದೇಶದ ತಂಡದ ಪರ) ಪೆಲೆಯವರ ದಾಖಲೆಯನ್ನು ಮುರಿಯುವುದು ಕಷ್ಟ. ಅವರ ಆಟವನ್ನು ಅನುಕರಿಸುವುದು ಇನ್ನೂ ಕಷ್ಟ. ವಿಶ್ವಖ್ಯಾತಿಯ ಈ ದಿಗ್ಗಜನನ್ನು ತಮ್ಮ ಕ್ಲಬ್ ಪರವಾಗಿ ಆಡಲು ರಿಯಲ್ ಮ್ಯಾಡ್ರಿಡ್, ಮ್ಯಾಂಚೆಸ್ಟರ್ ಯುನೈಟೆಡ್ ಮತ್ತು ಜುವೆಂಟಸ್ ತಂಡಗಳು ಆಗ ಶತಪ್ರಯತ್ನ ನಡೆಸಿದ್ದವು. ಆದರೆ ಬ್ರೆಝಿಲ್ ಸರ್ಕಾರ ಇವರನ್ನು 'ರಾಷ್ಟ್ರೀಯ ಸಂಪತ್ತು' ಎಂದು ಪ್ರಕಟಿಸಿ, ಯೂರೋಪಿಯನ್ ಕ್ಲಬ್‌ಗಳ ಖರೀದಿಗೆ ಅವಕಾಶವನ್ನೇ ಕೊಡಲಿಲ್ಲ! ಇನ್ನೊಬ್ಬ ಪೆಲೆ ಬರುವುದಿಲ್ಲ ಎನ್ನುವ ಮಾತಂತೂ ಅಕ್ಷರಶಃ ನಿಜ. ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65